

ಯಾವುದಾದರೂ ಒಂದು ಪ್ರಾಣಿ ಸಿಕ್ಕೇ ಸಿಗುತ್ತದೆ ಎಂಬ ನಂಬುಗೆ.

ದಟ್ಟ ಕಾಡೊಳಗಿಂದ ಹೊರಬಂದ ತಕ್ಷಣ ಸಿಗುವ ಚೌಡಿಗುಡಿ ನೋಡಲು ಮೋಹಕ ಜಾಗ. ಕಾನನದ ಕತ್ತಲೆಯಿಂದ ಜಿಗಿದು ಬಂದರೆ ನಮಗಿಲ್ಲಿ ವಿಶಾಲ ಹುಲ್ಲಿನ ಬಯಲು ಕಾಣುತ್ತದೆ. ಅದರಾಚೆಗೆ ತಿಳಿನೀಲಿ ಭದ್ರೆಯ ನೀರೊಡಲು. ಸಂಜೆಯ ಸೂರ್ಯಾಸ್ತ ಇಲ್ಲಿಂದ ಮಂತ್ರ ಮುಗ್ಧ. ಜಿಂಕೆ, ಕಡವೆ, ಕಾಡು ಹಂದಿಗಳ ಹಿಂಡು ಹೆಚ್ಚಾಗಿ ಇಲ್ಲಿನ ಹಸಿರು ಹುಲ್ಲಿನ ಆಸರೆ ಬಯಸಿ ಬರುತ್ತವೆ. ಈ ಸುಳಿವು ಗೊತ್ತಿರುವ ಚಿರತೆ, ಹುಲಿಗಳು ಇಲ್ಲೇ ಸುತ್ತಮುತ್ತಲಿನ ಪೊದೆಗಳ ಬಳಿ ಹೊಂಚು ಹಾಕಿ ಮಲಗುತ್ತವೆ.

ತಾಯಿಯ ಜೊತೆ ಮರಿಯ ಹೆಜ್ಜೆ ಗುರುತುಗಳಿದ್ದವು. ಮಣ್ಣಿನ ದಾರಿಯ ಮೇಲೆ ಸ್ಪಷ್ಟವಾಗಿ ಪಾದದ ಪಡಿಯಚ್ಚು ಮೂಡಿದ್ದವು. ಅದು ಸ್ವಲ್ಪ ಸಮಯದ ಮೊದಲೇ ಇಲ್ಲಿಂದ ಚೌಡಿಗುಡಿಯ ಕಡೆ ಹೋಗಿದೆ ಎಂಬುದಂತೂ ಸ್ಪಷ್ಟವಾಯಿತು. ಏಕೆಂದರೆ ಹೆಜ್ಜೆ ಗುರುತು ತಾಜಾ ಇದ್ದವು. ತನ್ನ ಮಗುವನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವ ಚಿರತೆ ಹೆಚ್ಚು ಜಾಗರೂಕವಾಗಿರುತ್ತದೆ. ಮಗುವಿಗೆ ಶಿಕಾರಿ ಕಲಿಸಲು ಚಿರತೆ ಹಸಿರು ಹುಲ್ಲಿನ ಬಯಲ ಕಡೆ ಬಂದಿರಬಹುದೆಂಬ ನಮ್ಮ ಅಂದಾಜು ಸರಿಯೋ, ತಪ್ಪೋ? ಖಂಡಿತಾ ಗೊತ್ತಿಲ್ಲ. ಎಲ್ಲವೂ ಊಹೆ ಮತ್ತು ಅಂದಾಜಿನ ಲೆಕ್ಕಾಚಾರಗಳು.

ಆ ಬಯಲು ತಲುಪಿದಾಗ ಕುಂಟುತ್ತಾ ಹೋಗುವ ಗಂಡು ಜಿಂಕೆಯೊಂದು ಕಾಣಿಸಿತು. ಅದರ ತೊಡೆಭಾಗಕ್ಕೆ ಏಟಾಗಿ ರಕ್ತವೂ ಸುರಿಯುತ್ತಿತ್ತು. ಗಂಡು ಜಿಂಕೆಗಳು ಆಗಾಗ ಪರಸ್ಪರ ಕಾದಾಡುತ್ತವೆ. ಆಗ ಚೂಪಾದ ಮತ್ತೊಂದು ಜಿಂಕೆಯ ಕೊಂಬು ತಗುಲಿ ಗಾಯವಾಗಿರುವ ಸಾಧ್ಯತೆ ಇರಬಹುದು. ಇಲ್ಲವೇ ಹುಲಿಯೋ, ಚಿರತೆಯೋ, ಕೆನ್ನಾಯಿಗಳೋ, ಅಟ್ಟಾಡಿಸಿ ಹಿಡಿಯಲೆತ್ನಿಸಿ ಹಿಂಗಾಲಿನ ಮೇಲೆ ಘಾಸಿಗೊಳಿಸಿರಬಹುದು. ಗಾಯಗೊಂಡು ತಪ್ಪಿಸಿಕೊಂಡು ಬಂದ ಈ ಜಿಂಕೆಯನ್ನು ಮತ್ತೆ ಹಿಡಿಯಲು ಯಾರಾದರೂ ಹಿಂಬಾಲಿಸಿ ಬರಬಹುದು. ನಾವು ಹುಡುಕುತ್ತಿರುವ ತಾಯಿ ಚಿರತೆಯೇ ಈ ಕೃತ್ಯದ ಯತ್ನ ಮಾಡಿರಬಹುದೇ? ಎಂದು ಆಲೋಚಿಸಿದೆವು. ಇಲ್ಲೊಂದು ಹೊಂಚುಸಂಚಿನ ಮರು ಆಕ್ರಮಣ ಜಿಂಕೆ ಮೇಲೆ ನಡೆದೀತೆಂಬ ಗುಮಾನಿಯೂ ಹೆಚ್ಚಿತು.

ಕಾಡಿನಲ್ಲಿ ಜಿಂಕೆಯಂತಹ ಪ್ರಾಣಿಯೊಂದು ಒಂಟಿಯಾಗುವುದು ಅಪಾಯದ ಮುನ್ಸೂಚನೆಗೆ ಆಹ್ವಾನ ನೀಡಿದಂತೆ. ಆಕ್ರಮಣ ಮಾಡುವ ಶಿಕಾರಿದಾರನಿಗೆ ಗಾಯಗೊಂಡ ಜೀವಿಯೆಂದರೆ ಸುಲಭದ ತುತ್ತು. ಗುಂಪಿನಲ್ಲಿರುವಾಗ ಸಿಗುವ ಧೈರ್ಯ, ನಿರಾಳತೆ ಒಬ್ಬಂಟಿಯಾದಾಗ ಇರುವುದಿಲ್ಲ. ದೈಹಿಕ ಶಕ್ತಿ, ಸಾಮರ್ಥ್ಯ ಕಳಕೊಂಡ ಯಾವ ಪ್ರಾಣಿಯನ್ನು ನಿಸರ್ಗ ರಕ್ಷಿಸುವುದಿಲ್ಲ. ಶಕ್ತಿಶಾಲಿ ಮಾತ್ರ ಬದುಕಬೇಕು ಎಂಬುದು ಕಾಡಿನ ಅಲಿಖಿತ ನಿಯಮ. ಒಂದು ಐಬಿದ್ದರೂ ಶಕ್ತಿಶಾಲಿ ಹುಲಿಗೂ ಅಪಾಯ ತಪ್ಪಿದ್ದಲ್ಲ. ಸಣ್ಣ ಗಾಯವಾದ ಹಾವನ್ನು ಇರುವೆ, ಗೊದ್ದಗಳು ಸೇರಿ ನಿರ್ದಾಕ್ಷಿಣ್ಯವಾಗಿ ಸಾಯಿಸುತ್ತವೆ. ಆನೆಯ ಸೊಂಡಿಲೊಳಗೆ ಇರುವೆ, ಗೊದ್ದ ಹೋದರೂ ಆನೆಗೆ ಉಳಿಗಾಲವಿಲ್ಲ. ದೊಡ್ಡ ಜೀವಿಯೊಂದನ್ನು ಅತ್ಯಂತ ಚಿಕ್ಕ ಜೀವಿಯೊಂದು ಸತಾಯಿಸಿ ಕೊಲ್ಲುವುದೇ ಈ ನಿಸರ್ಗದ ಅಚ್ಚರಿ. ಎಲ್ಲಾ ಜೀವರಾಶಿಗಳನ್ನು ಮಣ್ಣೊಳಗೆ ಕರಗಿಸಿ ಮಾಯ ಮಾಡುವ ಸೂಕ್ಷ್ಮಜೀವಿಗಳು ಕೂಡ ಹೀಗೆಯೇ ಕಣ್ಣಿಗೆ ಕಾಣುವುದಿಲ್ಲ. ನಮ್ಮ ದೃಷ್ಟಿಗೆ ಬೀಳದ ಇಂತಹ ಅಗೋಚರ ಕ್ರಿಯೆಗಳು ಕಾಡಿನಲ್ಲಿ ಎಲ್ಲೆಲ್ಲೋ ನಡೆಯುತ್ತಲೇ ಇರುತ್ತವೆ!

ಸುತ್ತಮುತ್ತಲಿನ ಪೊದೆಗಳ ಸಂದಿಗೊಂದಿಗಳ ಮೇಲೆ ಬೈನಾಕ್ಯುಲರ್ ಕಣ್ಣು ಹಾಯಿಸಿ, ಯಾರಾದರೂ ಶಿಕಾರಿದಾರ ಕೂತಿದ್ದಾನಾ? ಎಂದು ಪತ್ತೆದಾರಿ ಶುರು ಮಾಡಿದೆವು. ನಮಗೆಲ್ಲಾ ಒಂದು ಭಾಷೆ ಇರುವಂತೆ